ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 9-02-2017

## ಪತ್ರಿಕಾ ಆಮಂತ್ರಣ

1. ಮಾಜಿ ಮುಖ್ಯಮಂತ್ರಿ ದಿ. ಕೆಂಗಲ್ ಹನುಮಂತಯ್ಯರವರ 109ನೇ ಜನ್ಮ ದಿನದ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ:
   ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
   ದಿನಾಂಕ: 10-02-2017, ಶುಕ್ರವಾರ, ಸಮಯ: ಬೆಳಿಗ್ಗೆ: 9-45 ಗಂಟೆಗೆ
   ಸ್ಥಳ: ವಿಧಾನಸೌಧದ ಪಶ್ಚಿಮ ದಿಕ್ಕಿನಲ್ಲಿರುವ ಪ್ರತಿಮೆ ಬಳಿ, ವಿಧಾನಸೌಧ, ಬೆಂಗಳೂರು.

2. <u>ಪತ್ರಿಕಾಗೋಷ್ಠಿ:</u>

   ಹವ್ಯಾಸಿ ನಾಟಕೋತ್ಸವ ಕುರಿತಂತೆ:
   ಕೆ.ಎ.ದಯಾನಂದ, ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ,
   ದಿನಾಂಕ 10-02-2017, ಶುಕ್ರವಾರ, ಸಮಯ: 11.00 ಗಂಟೆಗೆ
   ಸ್ಥಳ: ಅಂತರಂಗ, ಕನ್ನಡ ಭವನ, ಬೆಂಗಳೂರು.

3. **<u>Joint Press Meet:</u>**

   <u>Make in India - Make in Karnataka and Aero India Show</u>

   **D.V. Prasad, Addtional Chief Secretary, Commerce and Industries Department, GOK and**
   **Gaurav Gupta, Commissioner, Industries and Commerce Department, GOK**
   **Date: 10-02-2017 , Friday Time : 12.00 Noon,**
   **Place: Room No. 313, Committee Hall, 3rd Floor, Vidhana Soudha, Bengaluru.**

# ಪತ್ರಿಕಾ ಪ್ರಕಟಣೆ

## ಅಗ್ನಿಶಾಮಕ ತರಬೇತಿ ಶಾಲೆ ದೇಶದಲ್ಲಿಯೇ ಅತ್ಯುತ್ತಮ
## – ಡಾ. ಡಿ.ವಿ. ಗುರುಪ್ರಸಾದ್

ಬೆಂಗಳೂರು, ಫೆಬ್ರವರಿ 9 , (ಕರ್ನಾಟಕ ವಾರ್ತೆ)

ನಮ್ಮ ರಾಜ್ಯದ ಅಗ್ನಿಶಾಮಕ ತರಬೇತಿ ಶಾಲೆಯು ದೇಶದಲ್ಲಿಯೇ ಅತ್ಯುತ್ತಮ ಎಂಬ ಹೆಗ್ಗಳಿಕೆಯನ್ನು ಹೊಂದಿದೆ ಎಂದು ನಿವೃತ್ತ ಐ.ಪಿ.ಎಸ್. ಅಧಿಕಾರಿಯಾದ ಡಾ.ಡಿ.ವಿ. ಗುರುಪ್ರಸಾದ್ ಹೇಳಿದರು.

ಇಂದು ಆರ್.ಎ. ಮುಂಡ್ಕುರ್ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಅಕಾಡೆಮಿಯಲ್ಲಿ ಕರ್ನಾಟಕ ರಾಜ್ಯ ಗೃಹರಕ್ಷಕದಳ ಪೌರರಕ್ಷಣೆ ಹಾಗೂ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ 2016–17ನೇ ಸಾಲಿನ ವೃತ್ತಿಪರ ಹಾಗೂ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು.

ಈ ತರಬೇತಿ ಶಾಲೆಯಿಂದ ತರಬೇತಿ ಪಡೆದ ಗೃಹರಕ್ಷಕ ಅಗ್ನಿಶಾಮಕ ಮತ್ತು ಪೌರರಕ್ಷಕ ದಳದವರು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಮೂಲಕ ಪೊಲೀಸ್ ಇಲಾಖೆಯ ಘನತೆಯನ್ನು ಹೆಚ್ಚಿಸಿದ್ದಾರೆ. ಇವರುಗಳ ಸಹಾಯವಿಲ್ಲದೆ ಪೊಲೀಸ್ ಇಲಾಖೆಯು ಉತ್ತಮವಾಗಿ ಕಾರ್ಯನಿರ್ವಹಿಸಲು ಖಂಡಿತವಾಗಿ ಸಾಧ್ಯವಿಲ್ಲ. ಈ ನಮ್ಮ ತರಬೇತಿ ಶಾಲೆಯಿಂದಲೇ ನೆರೆಹೊರೆ ರಾಜ್ಯದವರು ಕೂಡ ತರಬೇತಿಯನ್ನು ಪಡೆದುಕೊಳ್ಳುತ್ತಿದ್ದಾರೆ ಎಂದರು.

ಅತಿ ವೇಗವಾಗಿ ಬೆಳೆಯುತ್ತಿರುವ ಬೃಹತ್ ಬೆಂಗಳೂರು ಮಹಾನಗರದ ಟ್ರಾಫಿಕ್ ಅನ್ನು ಗೃಹರಕ್ಷಕದಳದವರು ತುಂಬಾ ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದರೆ, ಅಗ್ನಿಶಾಮಕ ದಳದವರು ಎಲೆ ಮರೆಯಕಾಯಿಯಂತೆ ತಮ್ಮ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಅದೇ ರೀತಿ ಸ್ವಯಂ ಸೇವಕರಾಗಿ ತೊಡಗಿರುವ ಇವರು ವಿಪತ್ತು ಮತ್ತು ಅವಘಡಗಳು ಸಂದರ್ಭದಲ್ಲಿ ಸಾರ್ವಜನಿಕರ ರಕ್ಷಣೆ ಮಾಡುತ್ತಾರೆ. ಎಂದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಪಟು ಕು. ಕರುಣಾ ಜೈನ್ ಅವರು ಮಾತನಾಡಿ ಕ್ರೀಡೆ ಜೀವನದ ಒಂದು ಅಂಗ, ಕ್ರೀಡೆಯಿಂದ ದೇಹವನ್ನು ಮಾನಸ್ಸನ್ನು ದೈಹಿಕವಾಗಿ ಸಧೃಡವಾಗಿರಿಸಿಕೊಳ್ಳಲು ಸಾಧ್ಯ. ಕ್ರೀಡೆಯಲ್ಲಿ ಸೋಲು ಗೆಲುವುವಿಗಿಂತ ಭಾಗವಹಿಸುವುದು ಮುಖ್ಯವೆಂದರು.

ತ್ರಿವರ್ಣ ಧ್ವಜ ಬಣ್ಣಗಳ ಬಲೂನುಗಳನ್ನು ಆಕಾಶಕ್ಕೆ ಹಾರಿ ಬಿಡುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಲಾಯಿತು. ಕಳೆದ ಬಾರಿಯ ಕ್ರೀಡಾಕೂಟದ ಚಾಂಪಿಯನ್ ಆದ ಮಂಗಳೂರು ವಲಯದ ಶ್ರೀ ರವಿರಾಜ್ ಅವರು ಕ್ರೀಡಾಜ್ಯೋತಿಯನ್ನು ಬೆಳಗಿಸಿದರು.

ಗೃಹರಕ್ಷಕ ಅಗ್ನಿಶಾಮಕ ಮತ್ತು ತುರ್ತುಸೇವಾ ದಳ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ವಿಜೇತರಾಗಿರುವ ಕ್ರೀಡಾಪಟುಗಳು ರಾಜ್ಯ ಮಟ್ಟದ ಈ ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದಾರೆ. ಈ ಸಮಾರಂಭದಲ್ಲಿ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ಸಮಾದೇಷ್ಟರು, ಗೃಹರಕ್ಷಕ ದಳ ನಿರ್ದೇಶಕರಾದ ಎಂ.ಎನ್. ರೆಡ್ಡಿ, ಐ.ಪಿ.ಎಸ್. ಅಧಿಕಾರಿ ಟಿ. ಆರ್. ಸುರೇಶ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಕೆಎನ್‌ಕೆ:ಬಿಜಿಪಿ:ಜಿಪಿಆರ್.

## ಸಾರಿಗೆ ಅದಾಲತ್

**ಬೆಂಗಳೂರು, ಫೆಬ್ರವರಿ 9 , (ಕರ್ನಾಟಕ ವಾರ್ತೆ)**

ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಕಚೇರಿ ಬೆಂಗಳೂರು (ದಕ್ಷಿಣ) ಜಯನಗರ ಇಲ್ಲಿ ಫೆಬ್ರವರಿ 18 ರಂದು ಶನಿವಾರ ಮಧ್ಯಾಹ್ನ 3.30 ಗಂಟೆಗೆ ಸಾರಿಗೆ ಅದಾಲತ್‌ನ್ನು ಕಚೇರಿಯ ಎರಡನೇ ಮಹಡಿಯ ಆಡಿಟೋರಿಯಂನಲ್ಲಿ ಹಮ್ಮಿಕೊಂಡಿದೆ.

ಅದಾಲತ್‌ನಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ವ್ಯಾಪ್ತಿಗೆ ಬರುವ ಸಾರ್ವಜನಿಕರು ಈ ಅದಾಲತ್‌ನಲ್ಲಿ ಪಾಲ್ಗೊಂಡು ತಮ್ಮ ಅಹವಾಲು ಮತ್ತು ಕುಂದುಕೊರತೆಗಳ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಜೆಡಿ:ಜಿಪಿಆರ್.

<u>ವಿಧಾನ ಪರಿಷತ್ತಿನಲ್ಲಿ ಇಂದು:</u>

# ಮಾದಕ ವಸ್ತುಗಳ ಸೇವನೆಗೆ ತಡೆ

**ಬೆಂಗಳೂರು, ಫೆಬ್ರವರಿ 9 , (ಕರ್ನಾಟಕ ವಾರ್ತೆ)**

1985 ರಲ್ಲಿ ಕೇಂದ್ರ ಸರ್ಕಾರವು **Narcotic Drugs and Psychotropic Substances Act-1985 (NDPS)** ಕಾಯ್ದೆಯನ್ನು ರಚಿಸಲಾಗಿದ್ದು, ಇದು ಘೋರ ಅಪರಾಧ ಹಾಗೂ ಜಾಮೀನು ರಹಿತ ಪ್ರಕರಣವಾಗಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಅವರು ತಿಳಿಸಿದರು.

ಇಂದು ವಿಧಾನ ಪರಿಷತ್ ಸದಸ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಅವರ ಪ್ರಶ್ನೆಗೆ ಮೇಲ್ಮನೆಯಲ್ಲಿ ಉತ್ತರಿಸುತ್ತಾ ಜೂನ್ 26 ರಂದು ಅಂತರರಾಷ್ಟ್ರೀಯ ಮಾದಕ ವಸ್ತು ವಿರೋಧಿ

ದಿನವನ್ನಾಗಿ ಆಚರಿಸಿದ್ದು, ಮಾದಕ ವ್ಯಸನಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಮತ್ತು ಯುವಕರು ಬಲಿಯಾಗುತ್ತಿರುವುದರಿಂದ ಶಾಲಾ-ಕಾಲೇಜುಗಳಲ್ಲಿ ಜಾಗೃತಿ ಸಭೆಗಳನ್ನು ನಡೆಸಲಾಗುತ್ತಿದೆ ಎಂದು ಸಚಿವರು ಸದನಕ್ಕೆ ತಿಳಿಸಿದರು.

ಕೆಎನ್‌ವಿ:ಜಿಪಿಆರ್.

# ನೀರಿನ ಸದ್ಬಳಕೆಯ ಬಗ್ಗೆ ಅರಿವು

ಬೆಂಗಳೂರು, ಫೆಬ್ರವರಿ 9 , (ಕರ್ನಾಟಕ ವಾರ್ತೆ)

ಕುಡಿಯುವ ನೀರನ್ನು ವ್ಯರ್ಥ ಮಾಡದೆ ವಿವೇಚನೆಯಿಂದ ಉಪಯೋಗಿಸಲು ಮಾಧ್ಯಮಗಳು, ಭಿತ್ತಿಪತ್ರ, ಕರಪತ್ರ, ಜಾಹೀರಾತು ಫಲಕಗಳ ಮುಖಾಂತರ ಮಾಹಿತಿ ನೀಡಲಾಗುತ್ತಿದೆ ಎಂದು ನಗರಾಭಿವೃದ್ಧಿ ಮತ್ತು ಹಜ್ ಸಚಿವ ಆರ್. ರೋಷನ್ ಬೇಗ್ ಅವರು ತಿಳಿಸಿದರು.

ಇಂದು ವಿಧಾನ ಪರಿಷತ್ತು ಸದಸ್ಯರ ಕೆ.ಸಿ. ಕೊಂಡಯ್ಯ ಅವರ ಪ್ರಶ್ನೆಗೆ ಉತ್ತರಿಸುತ್ತಾ ನೀರಿನ ಸೋರುವಿಕೆಯನ್ನು ತುರ್ತಾಗಿ ತಡೆಯಲು 24/7 ಸಹಾಯವಾಣಿಯನ್ನು ಬೆಂಗಳೂರು ಜಲಮಂಡಳಿಯ ಕೇಂದ್ರ ಕಚೇರಿಯಲ್ಲಿ ರಚಿಸಲಾಗಿದೆ ಮತ್ತು ದೂರವಾಣಿ ಸಂಖ್ಯೆ 1916 ಮೂಲಕ ಸಂಪರ್ಕಿಸುವ ಅನುಕೂಲ ಕಲ್ಪಿಸಿದೆ ಎಂದರು.

ಕೆಎನ್‌ವಿ:ಜಿಪಿಆರ್.

## ವಿಧಾನಸಭೆಯಲ್ಲಿ ಇಂದು:

### ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲು ಜಿಲ್ಲಾವಾರು ಅನುದಾನ- ಉಮಾಶ್ರೀ

ರಾಜ್ಯದ ಎಲ್ಲ ಜಿಲ್ಲೆಗಳ ಜಿಲ್ಲಾ ಮಟ್ಟದಲ್ಲಿ ಮಾತ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿಗಳಿದ್ದು, ಜಿಲ್ಲೆಯನ್ನು ಘಟಕವನ್ನಾಗಿಸಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಜಿಲ್ಲಾವಾರು ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಕನ್ನಡ ಸಂಸ್ಕೃತಿ ಸಚಿವೆ ಉಮಾಶ್ರೀ ಅವರು ಇಂದು ವಿಧಾನ ಸಭೆಗೆ ತಿಳಿಸಿದರು.

ಪ್ರಶ್ನೋತ್ತರ ಅವಧಿಯಲ್ಲಿ ಶಾಸಕ ಎಂ. ರಾಜಣ್ಣ ಅವರ ಪ್ರಶ್ನೆಗೆ ಉತ್ತರಿಸುತ್ತಾ, ಕನ್ನಡ ಮತ್ತು ಸಂಸ್ಕೃತಿ ಕಛೇರಿಗಳಿದ್ದು ತಾಲ್ಲೂಕುಮಟ್ಟದಲ್ಲಿ ಇಲ್ಲವಾದ ಕಾರಣ ಜಿಲ್ಲೆಯನ್ನು ಘಟಕವನ್ನಾಗಿಸಿ ಅನುದಾನ ಬಿಡುಗಡೆ ಮಾಡಲಾಗುತ್ತದೆ ಹೊರತು ವಿಧಾನ ಸಭಾ ಕ್ಷೇತ್ರವಾರು ಅನುದಾನ ಬಿಡುಗಡೆ ಮಾಡುವುದಿಲ್ಲ ಎಂದು ವಿವರಿಸಿದರು.

ಮುಂದುವರೆದು ಮಾತನಾಡುತ್ತಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 2013–14 ನೇ ಸಾಲಿನಲ್ಲಿ ಯೋಜನಾ ಕಾರ್ಯಕ್ರಮಗಳಿಗೆ 14018.35 ಯೋಜನೇತರ ಕಾರ್ಯಕ್ರಮಗಳಿಗೆ 2995.23, 2014–15 ನೇ ಸಾಲಿನಲ್ಲಿ ಯೋಜನಾ ಕಾರ್ಯಕ್ರಮಗಳಿಗೆ 16969.77 ಯೋಜನೇತರ ಕಾರ್ಯಕ್ರಮಗಳಿಗೆ 2987.71, 2015–16 ನೇ ಸಾಲಿನಲ್ಲಿ ಯೋಜನಾ ಕಾರ್ಯಕ್ರಮಗಳಿಗೆ 21288.00 ಯೋಜನೇತರ ಕಾರ್ಯಕ್ರಮಗಳಿಗೆ 3397.00, ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಶಿಡ್ಲಘಟ್ಟ ಮತಕ್ಷೇತ್ರ ವ್ಯಾಪ್ತಿಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಭಿವೃದ್ಧಿ ಕಾರ್ಯಗಳಿಗೆ ಬಳಕೆ ಮಾಡಿರುವ ಅನುದಾನ ಕುರಿತು ಶಾಸಕರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವೆ ಕಳೆದ ಮೂರು ವರ್ಷಗಳಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಗೆ 18,807,212 ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಎಂಆರ್‌ಎಂ/ಪಿಎಸ್‌ಐ/ಕೆಎಂ